ಚಂದ್ರಕಾಂತ ಹೇಳುತ್ತಿದ್ದುದರಲ್ಲಿ ತಪ್ಪೇನೂ ಇಲ್ಲ ಎಂದು ಚೇತನಾಳಿಗೆ ಅನ್ನಿಸುತ್ತಿದ್ದರೂ, ದಿನಾ ಹೋಗಿ ಅದೇ ಅಂಗಡಿಯ ಅದೇ ವ್ಯಕ್ತಿಯಿಂದ ಸಾಮಾನು ತರುವುದರಿಂದ ಆಗುವ ಬದಲಾವಣೆಯೇನು ಅಥವಾ ಅದರಿಂದ ಸಾಧಿಸಿದ್ದಾದರೂ ಏನು ಎಂಬುದು ಅರ್ಥವಾಗುತ್ತಿರಲಿಲ್ಲ. ಮನೆಯೊಳಗೇ ಇರುವ ಯಾತನೆಗಿಂತ ಹೊರಹೋಗುವುದೇ ದೊಡ್ಡ ಸಂಕಟ ಎಂದು ಆಕೆಗನಿಸುತ್ತಿತ್ತು.

ಅಡಿಗೆಯೂ ಸೇರಿದಂತೆ ಮನೆಗೆಲಸಗಳೆಲ್ಲ ಒಂದೆರಡು ಗಂಟೆಗಳಲ್ಲಿ ಮುಗಿದು ಹೋಗುತ್ತಿತ್ತು. ಉಳಿದ ಸಮಯದಲ್ಲಿ ಆಕೆಯ ಕೈ ಹಿಡಿದಿದ್ದು ಟೀವಿ. ಅದೃಷ್ಟವಶಾತ್ ಜಗತ್ತಿನ ಹಲವು ಚಾನಲ್ಲುಗಳ ನಡುವೆ ಕನ್ನಡ ಚಾನಲ್ಲೂ ಬರುತ್ತಿತ್ತು ಅಲ್ಲಿ. ಬರೇ ಟೀವಿ ನೋಡುವುದರ ಏಕತಾನತೆಯಿಂದ ತಪ್ಪಿಸಿಕೊಳ್ಳಲು ಆಕೆ ಕಾರ್ಯಕ್ರಮದ ನಂತರದ 'ಅಭಿಪ್ರಾಯ ತಿಳಿಸಿ' ವಿಭಾಗಕ್ಕೆ ಉದ್ದುದ್ದದ ಪತ್ರಗಳನ್ನು ಬರೆದು ಹಾಕತೊಡಗಿದಳು. ಮೊದಮೊದಲೆಲ್ಲಾ 'ಚೆನ್ನಾಗಿದೆ', 'ಖುಷಿಯಾಯ್ತು' ಎಂದು ಬರೆಯುತ್ತಿದ್ದವಳು ಬರಬರುತ್ತ 'ತುಂಬಾ ಎಳೆಯುತ್ತಿದ್ದೀರಿ', 'ಬೋರು' ಎಂದು ಬರೆಯುವ ಧೈರ್ಯವನ್ನು ಮಾಡುತ್ತಿದ್ದಳು. ವೀಕ್ಷಕರ ಪತ್ರ ಓದುವ ಕಾರ್ಯಕ್ರಮದಲ್ಲಿ ತನ್ನ ಪತ್ರದ ಪ್ರಸ್ತಾಪವೇನಾದರೂ ಬಂದೀತೋ ಎಂದು ಟೀವಿಯ ಎದುರಿಂದ ಕದಲದೇ ಕಾಯುತ್ತಿದ್ದಳು.

